ಓ ಎಸ್ ನಂಃ 127/2023
ಪಿ. ಡಬ್ಲ್ಯೂ-1

(ಇಂದು ದಿನಾಂಕ **27-10-2025** ರಂದು ಮಧ್ಯಂತರ ಅರ್ಜಿ ನಂಃ **10** ಮತ್ತು **11** ರ ಆದೇಶದನ್ವಯ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು)

ಪಾಟೀಸವಾಲುಃ ಪ್ರತಿವಾದಿ ನಂಃ **1** ರಿಂದ **7** ರವರ ಪರ ಶ್ರೀ ಪಿ ಎಸ್ ಯು ವಕೀಲರಿಂದ

ನಾನು ಮೂರನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ . ನಮ್ಮ ಮನೆತನಕ್ಕೆ ಸಂಬಂಧಪಟ್ಟ ದಾವೆಗಳು ನ್ಯಾಯಾಲಯದಲ್ಲಿ ಇದ್ದವು ಎಂದರೆ ಸರಿ . ಸದರಿ ದಾವೆಗಳಲ್ಲಿ ನ್ಯಾಯಾಲಯಕ್ಕೆ ನಾನು ಬರುತ್ತಿದ್ದೆ ಎಂದರೆ ಸರಿ . ಸಾಕ್ಷಿಯು ಜೊತೆಗೆ ನಮ್ಮ ಅಣ್ಣನು ಬರುತ್ತಿದರು ಎಂದು ಹೇಳುತ್ತಾರೆ .

ಬೆಳ್ಳಿಗಟ್ಟಿ ಕುಟುಂಬದವರ ಮನೆತನ ಮೂಲತಃ ಕೃಷಿ ಕುಟುಂಬದ ಎಂದರೆ ಸರಿ .ನಿಮ್ಮ **ಸಾಕ್ಷಿ ವಿಚಾರಣೆಯ ಪ್ರತಿಜ್ಞಾ ಪತ್ರದಲ್ಲಿ ಬೆಳ್ಳಿಗಟ್ಟಿ ಕುಟುಂಬದವರ ಕೃಷಿ ಮೂಲದಿಂದ ವಾರ್ಷಿಕ** ಆದಾಯ ಎಷ್ಟು ಇತ್ತು ಎಂದು ಬರೆಯಿಸಿದ್ದಿರಾ ಎಂದು ಕೇಳಿದರೆ ಸಾಕ್ಷಿಯು 10-15 ಲಕ್ಷ ಆದಾಯ ಇತ್ತು ಎಂದು ಬರೆಯಿಸಿರುತ್ತೇನೆ **ಎಂದು ಹೇಳುತ್ತಾರೆ** . ಸಾಕ್ಷಿಗೆ ತನ್ನ ಪ್ರತಿಜ್ಞಾ ಪತ್ರ ತೊರಿಸಿ ಈಗ ನಾನು ಹೇಳಿದಂತೆ ಬರೆದಿಲ್ಲ ಎಂದು ಕೇಳಲಾಗಿ ಸಾಕ್ಷಿಯು ನಜರಚುಕಿನಿಂದ ಬಿಟ್ಟುಹೋಗಿದೆ **ಎಂದು ಹೇಳುತ್ತಾರೆ** . ಬೆಳ್ಳಿಗಟ್ಟಿ ಕುಟುಂಬದವರ ವಾರ್ಷಿಕ ಖರ್ಚು ಮತ್ತು ಉಳಿತಾಯ ಎಷ್ಟು ಎನ್ನುವುದನ್ನು ನಾನು ಹೇಳಿ ಬರೆಯಿಸಿಲ್ಲ .

ಗಂಗಪ್ಪ ಮತ್ತು ಸೋಮಪ್ಪ ಬೆಳ್ಳಿಗಟ್ಟಿ ಇವರ ಹೆಸರುಗಳಲ್ಲಿ ಎಷ್ಟು ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ . ಸೋಮಪ್ಪ ಇವರ ಮರಣ ಹೊಂದಿ 20-25 ವರ್ಷ

ಓ ಎಸ್ ನಂ፡ 127/2023
ಪಿ. ಡಬ್ಲ್ಯೂ-1

ಕಳೆದಿರಬಹುದು . ನನ್ನ **ಸಾಕ್ಷಿ ವಿಚಾರಣೆಯ ಪ್ರತಿಜ್ಞಾ ಪತ್ರದಲ್ಲಿ ಸೋಮಪ್ಪನ ಮರಣದ ದಿನಾಂಕವನ್ನು ಖಚಿತವಾಗಿ ಹೇಳಿಲ್ಲ** .

1 ನೇ ಪ್ರತಿವಾದಿಯ ಗಂಡ ಮಲ್ಲಪ್ಪ ಮಲೆನಾಡ ಶಿಕ್ಷಣ ಸಂಸ್ಥೆಯಲ್ಲಿಶಿಕ್ಷಕನಾಗಿ ಕೆಲಸ ಮಾಡುತ್ತಿದ್ದ . 1 ನೇ ಪ್ರತಿವಾದಿಯ ಗಂಡನ ಪಗಾರ ಎಷ್ಟಿತ್ತು ಅದೇ ರೀತಿ ಖರ್ಚು ಮತ್ತು ಉಳಿತಾಯ ಎಷ್ಟಿತ್ತು ಎಂದು ಕೇಳಿದರೆ ಸಾಕ್ಷಿಯು ಸದರಿಯವರ ಹುದ್ದೆಯು ಮೊದಲು 10 ವರ್ಷ ಸ್ಯಾಂಕ್ಷನ್ಡ್ ಆಗಿರಲಿಲ್ಲ ನಂತರ ಆಗಿರುತ್ತದೆ ಎಂದು ಹೇಳುತ್ತಾರೆ . 1 ನೇ ಪ್ರತಿವಾದಿಯ ಗಂಡ ಮಲ್ಲಪ್ಪ ಎಷ್ಟು ವರ್ಷ ಸೇವೆ ಸಲ್ಲಿಸಿದ್ದಾನೆ ಎಂದು ನನಗೆ ಗೊತ್ತಿಲ್ಲ . ನನ್ನ **ಸಾಕ್ಷಿ ವಿಚಾರಣೆಯ ಪ್ರತಿಜ್ಞಾ ಪತ್ರದಲ್ಲಿ** 1 ನೇ ಪ್ರತಿವಾದಿಯ ಗಂಡ ಮಲ್ಲಪ್ಪ ಇವರು ಶಿಕ್ಷಕನಾಗಿದ್ದ ಮತ್ತು ಸ್ವತಂತ್ರ ಉತ್ಪನ್ನ ಹೊಂದಿದ್ದ ಎಂದು ಬರೆಯಿಸಿಲ್ಲ . ಅದೇ ರೀತಿ 1 ನೇ ಪ್ರತಿವಾದಿಯ ಗಂಡ ಒಟ್ಟು ಪಗಾರ ಎಷ್ಟು ಅವನು ಏನೇನು ಖರ್ಚು ಮಾಡುತ್ತಿದ್ದ ಎನ್ನುವ ಕುರಿತು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ .

ಪ್ರತಿವಾದಿ 2 ಮತ್ತು 3 ರವರು ಯಾವ ಉದ್ಯೋಗ ಮಾಡುತ್ತಿದ್ದಾರೆ , ಯಾವಾಗಿನಿಂದ ಉದ್ಯೋಗ ಮಾಡುತ್ತಿದ್ದಾರೆ ಅವರ ಆಯ - ವ್ಯಯ ಎಷ್ಟು ಎಂದು ಕೇಳಿದರೆ ಸಾಕ್ಷಿಯು ಮೊದಲು ಮೊಬೈಲ ಅಂಗಡಿ ಇಟ್ಟರು ನಷ್ಟ ಆಯಿತು ನಂತರ ಚಹಾದ ಅಂಗಡಿ ಇಟ್ಟರು ಅದು ನಷ್ಟ ಆಯಿತು **ಎಂದು ಹೇಳುತ್ತಾರೆ** . ಮೊಬೈಲ ಅಂಗಡಿ ಇಟ್ಟರು ನಷ್ಟ ಆಯಿತು ನಂತರ ಚಹಾದ ಅಂಗಡಿ ಇಟ್ಟರು ನಷ್ಟ ಆಯಿತು ಎನ್ನುವುದನ್ನು ನನ್ನ **ಸಾಕ್ಷಿ ವಿಚಾರಣೆಯ ಪ್ರತಿಜ್ಞಾ ಪತ್ರದಲ್ಲಿ ಹೇಳಿಲ್ಲ** . **ಪ್ರತಿವಾದಿ 2 ಮತ್ತು 3 ರವರು**

ಧಾರವಾಡದಲ್ಲಿ ಲೂಬಿರಿಕೆಂಟ್ ಅಂಗಡಿ ನಡೆಸುತ್ತಿದ್ದ ವಿಚಾರ ನನಗೆ ಗೊತ್ತಿಲ್ಲ . ಪ್ರತಿವಾದಿ 2 ಮತ್ತು 3 ರವರು ಆದಾಯ ತೇರಿಗೆ ಪಾವತಿದಾರರು ಎನ್ನುವ ವಿಚಾರ ನನಗೆ ಗೊತ್ತಿಲ್ಲ . ಪ್ರತಿವಾದಿ 1 ರವರ ಗಂಡ ಹಾಗೂ ಪ್ರತಿವಾದಿ 2 ಮತ್ತು 3 ರವರ ಉದ್ಯೋಗ , ಆದಾಯ ಮತ್ತು ವ್ಯಯಗಳ ಬಗ್ಗೆ ತಿಳಿಯಬಾರದು ಎನ್ನುವ ಕಾರಣಕ್ಕಾಗಿ ನನ್ನ ಸಾಕ್ಷಿ ವಿಚಾರಣೆಯ ಪ್ರತಿಜ್ಞಾ ಪತ್ರದಲ್ಲಿ ಬರೆಯಿಸಿಲ್ಲ ಎಂದರೆ ಸರಿಯಲ್ಲ . ಮೊಬೈಲ ಅಂಗಡಿ ಮತ್ತು ಚಹಾದ ಅಂಗಡಿ ನಷ್ಟ ಆದ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಇಟ್ಟುಕೊಂಡಿಲ್ಲ . ಪ್ರತಿವಾದಿ 2 ಮತ್ತು 3 ರವರು ದೊಡ್ಡ ವ್ಯವಹಾರ ಮಾಡುವ ಉದ್ದೇಶದಿಂದ ಮೊಬೈಲ ಅಂಗಡಿ ಮತ್ತು ಚಹಾದ ಅಂಗಡಿಯನ್ನು ಮುಚ್ಚಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ .

ಮಲ್ಲಪ್ಪ ಮತ್ತು ಅವರ ಸಹೋದರರ ನಡುವೆ ವಾಟಣಿ ಕುರಿತು ಪಂಚಾಯಿತಿ ಮಾಡಿದ್ದೆವು ಆದರೆ ಅದು ಎಲ್ಲಿ , ಯಾವ ತಾರೀಖಿನಂದು ಹೇಳಲು ಆಗುವುದಿಲ್ಲ ಆದರೆ ಹೊಲದಲ್ಲಿ ಮಾಡಿದ್ದೆವು ಎಂದು ಹೇಳುತ್ತಾರೆ . ಸದರಿ ಪಂಚಾಯಿತಿಯಲ್ಲಿ ನಾನು , ಅಮರಿಕೊಪ್ಪದವ, ಇನ್ನೊಬ್ಬ ವ್ಯಕ್ತಿ ಮರಣ ಹೊಂದಿದ್ದಾನೆ ಅವನ ಹೆಸರು ನೆನಪಿಲ್ಲ . ನಾನು ಹೇಳಿದಂತೆ ಮಲ್ಲ ಮತ್ತು ಮತ್ತು ಅವರ ಸಹೋದರರ ನಡುವೆ ವಾಟಣಿ ಕುರಿತು ಹಿರಿತನ ಆಗಿಲ್ಲ ಆ ಕಾರಣದಿಂದ ನಾನು ಪಂಚಾಯಿತಿ ಮಾಡಿದ ದಿನಾಂಕ ,

ಸ್ಥಳ ಹಾಗೂ ಹಾಜರಿದ್ದ ವ್ಯಕ್ತಿಗಳ ಹೆಸರು ಹೇಳಲು ಆಗುತ್ತಿಲ್ಲ ಎಂದರೆ ಸರಿಯಲ್ಲ .

ಮಲ್ಲಪ್ಪ ಇವನು ತನ್ನ ಸಹೋದರರಿಗೆ ಆಸ್ತಿಗಳು ಹೋಗಬಾರದು ಎನ್ನುವ ಕಾರಣಕ್ಕಾಗಿ ವಾಟಣಿ ಮಾಡಲು ನಿರಾಕರಿಸಿದ . ಯಾವ ಯಾವ ಆಸ್ತಿಗಳು ಹೋಗಬಾರದು ಎಂದು ನಿರಾಕರಿಸಿದ ಎನ್ನುವ ಸ್ವತ್ತುಗಳ ವಿವರ ನನಗೆ ಗೊತ್ತಿಲ್ಲ . ಮಲ್ಲಪ್ಪ ಬದುಕಿರುವಾಗ ನಾವು ಯಾವುದೇ ರೀತಿಯ ಹಿರಿತನ ಮಾಡಿಲ್ಲ ಮತ್ತು ನಾನು ನನ್ನ ಸಾಕ್ಷಿ ವಿಚಾರಣೆಯ ಪ್ರತಿಜ್ಞಾ ಪತ್ರದಲ್ಲಿ ಹೇಳಿರುವಂತೆ ಯಾವುದೇ ನಡುವಳಿ ನಡೆದಿಲ್ಲ ಎಂದರೆ ಸರಿಯಲ್ಲ . ಮಲ್ಲಪ್ಪನ ಮರಣದ ನಂತರ ನಾನು ಮತ್ತು ವಾದಿ ಈ ರೀತಿಯ ಸುಳ್ಳು ಕತೆ ಸೃಷ್ಟಿಮಾಡಿದ್ದೆವೆ ಎಂದರೆ ಸರಿಯಲ್ಲ .

ದಾವಾ ಸ್ವತ್ತುಗಳ ದಾಖಲೆಗಳನ್ನು ನಾನು ನೋಡಿಲ್ಲ . ಬೆಳ್ಳಿಗಟ್ಟಿ ಕುಟುಂಬದವರ ಆದಾಯ , ಖರ್ಚು ಹಾಗೂ ಉಳಿತಾಯ ತೋರಿಸುವ ದಾಖಲೆಗಳನ್ನು ನಾನು ನೋಡಿಲ್ಲ .

ವಾದಿಯರ ಕುಟುಂಬಕ್ಕೆ ಪಿತ್ರಾರ್ಜಿತವಾಗಿ ಬಂದ ಸ್ವತ್ತುಗಳ ಸರ್ವೆ ನಂಬರ ನನ್ನ ಸಾಕ್ಷಿ ವಿಚಾರಣೆಯ ಪ್ರತಿಜ್ಞಾ ಪತ್ರದಲ್ಲಿ ಬರೆಯಿಸಿಲ್ಲ . ಬೆಳ್ಳಿಗಟ್ಟಿ ಕುಟುಂಬದವರ ವ್ಯವಹಾರಗಳಲ್ಲಿ ನಾನು ಎಂದೂ ಭಾಗವಹಿಸಿಲ್ಲ . ಮಲ್ಲಪ್ಪ ಮತ್ತು ಅವರ ಮಕ್ಕಳಾದ

ಪ್ರತಿವಾದಿ 2 ಮತ್ತು 3 ರವರ ವ್ಯವಹಾರಗಳಲ್ಲಿ ನಾನು ಎಂದೂ ಭಾಗವಹಿಸಿಲ್ಲ . ಆದ್ದರಿಂದ ಅವರ ವೈಯಕ್ತಿಕ ವ್ಯವಹಾರಗಳ ಕುರಿತು ನಿಮಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ನಾವು ಹಿರಿತನ ಮಾತ್ರ ಮಾಡಿದ್ದು ಬೇರೆ ವಿಷಯ ಗೊತ್ತಿಲ್ಲ ಎಂದು ಹೇಳುತ್ತಾರೆ . ಸರ್ವೆ ನಂಃ 238/1 ಜಾಗದ ಕುರಿತು ಖರೀದಿ ವ್ಯವಹಾರದಲ್ಲಿ ನಾನು ಭಾಗಿಯಾಗಿಲ್ಲ ಸಾಕ್ಷಿಯು ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿದ್ದಾರೆ ಎಂದು ಸ್ವತಃ ಹೇಳುತ್ತಾರೆ . ಮಲ್ಲಪ್ಪ ಇವರು ಒಟ್ಟು ಕುಟುಂಬದ ಆದಾಯದಿಂದ ಸದರಿ ಸ್ವತ್ತನ್ನು ಖರೀದಿ ಮಾಡಿದ್ದಾರೆ ಎನ್ನುವ ಕುರಿತು ತೋರಿಸುವ ಸಾಕ್ಷಿ ಪುರಾವೆಗಳನ್ನು ನಾನು ನೋಡಿಲ್ಲ . ಆದ್ದರಿಂದ ಮಲ್ಲಪ್ಪ ಇವರು ಖರೀದಿ ಮಾಡಿದ ಆಸ್ತಿಯ ಕುರಿತು ನನಗೆ ಸ್ವಂತ ಜ್ಞಾನ ಇಲ್ಲ ಎಂದರೆ ಸರಿ .

ತಾರಿಹಾಳದಲ್ಲಿರುವ ಪ್ಯಾಕ್ಟರಿಯನ್ನು ನಾನು ನೋಡಿಲ್ಲ ಆದರೆ ವಾದಿಯರು ಹೇಳಿದ್ದರಿಂದ ಸದರಿ ಪ್ಯಾಕ್ಟರಿಯ ಬಗ್ಗೆ ತಿಳಿದುಕೊಂಡಿದ್ದೆನೆ . ತಾರಿಹಾಳದಲ್ಲಿರುವ ಪ್ಯಾಕ್ಟರಿಯನ್ನು ಖರೀದಿಗೆ ತೆಗೆದುಕೊಂಡಿದ್ದಾರೆ ಆದರೆ ನಾನು ಖರೀದಿ ಪತ್ರ ನೋಡಿಲ್ಲ ವಾದಿಯರು ಹೇಳಿದ್ದರಿಂದ ತಿಳಿದುಕೊಂಡಿದ್ದೆನೆ . ಸದರಿ ಪ್ಯಾಕ್ಟರಿ ನಡೆಸಲು ಪ್ರತಿವಾದಿ 2 ಮತ್ತು 3 ರವರು ಯಾವ ಯಾವ ಬ್ಯಾಂಕಿನಲ್ಲಿ ಸಾಲ ಪಡೆದಿದ್ದಾರೆ ಮತ್ತು ಎಷ್ಟು ಬಂಡವಾಳ ಹಾಕಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ . ಸದರಿ ಪ್ಯಾಕ್ಟರಿಯನ್ನು

ಹಾಕಲು ಒಟ್ಟು ಕುಟುಂಬದ ಆದಾಯ ಉಪಯೋಗಿಸಿದ್ದಾರೆ ಎಂದು ತೋರಿಸುವ ದಾಖಲೆ ನಾನು ನೋಡಿಲ್ಲ . ಮಲ್ಲಪ್ಪ ಮತ್ತು ಅವರ ಮಕ್ಕಳು ಸ್ವತಂತ್ರವಾಗಿ ಗಳಿಸಿದ ಆಸ್ತಿಯಲ್ಲಿ ವಾದಿಯರಿಗೂ ಸಹ ಹಿಸ್ಸೆ ಇದೆ ಎಂದು ವಾದಿಯರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನನ್ನ ಸಾಕ್ಷಿ ವಿಚಾರಣೆಯ ಪ್ರತಿಜ್ಞಾ ಪತ್ರದಲ್ಲಿ ಸಂಗತಿಗಳು ಸಂಪೂರ್ಣ ಸುಳ್ಳು ಎಂದರೆ ಸರಿಯಲ್ಲ .

ಮರುವಿಚಾರಣೆ ಃ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.